ದಿನಾಂಕಃ 20.03.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಎಂ.ಪಿ. ವಕೀಲರಿಂದಃ

ನನ್ನ ಹಾಗೂ ಆರೋಪಿ ನಡುವಿನ ವ್ಯವಹಾರದ ಬಾಬ್ತು ಯಾವುದೇ ದಾಖಲೆಯನ್ನು ಇಟ್ಟಿಲ್ಲ. ವ್ಯವಹಾರಿಕವಾಗಿ ಹಣ ಸಾಲವಾಗಿ ಕೊಟ್ಟರೆ ಅದಕ್ಕೆ ಬಡ್ಡಿ ಪಡೆಯಲಾಗುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಆರೋಪಿ ನನ್ನ ಸಂಬಂಧಿಕರಲ್ಲ. ವಿ.ಎಂ.ಸಿ.ಸಿ.ಎಸ್ ಗೋಲ್ಡ್ ಎಂಬ ಸಂಸ್ಥೆಯಲ್ಲಿ ಆರೋಪಿಯು ಗೋ-20 ಎಂಬ ಸ್ಕೀಮ್ ನಡಿ ಏಜೆಂಟ್ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಂಸ್ಥೆ ಬಾಂಬೆ ಬೇಸಡ್ ಎಂದರೆ ನನಗೆ ಗೊತ್ತಿಲ್ಲ. ಗೋ-20 ಎಂಬುದು ಹಣ ಹೂಡಿಕೆ ಸ್ಕೀಮ್ ಎಂದರೆ ನನಗೆ ಗೊತ್ತಿಲ್ಲ. ನನಗೆ rathangowda28@gmail.com ಎಂಬ ಇ-ಮೇಲ್ ಅಕೌಂಟ್ ಇದೆ ಎಂದರೆ ಸರಿ. ಗೋ-20 ಸ್ಕೀಮ್ ನಡಿ ನಾನು ಆರೋಪಿಯ ನಂತರದ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದೆ ಎಂದರೆ ನನಗೆ ಗೊತ್ತಿಲ್ಲ. ಸ್ಕೀಮ್ ಗೆ ಹೂಡಿಕೆ ಮಾಡುವಂತಹ ಹೂಡಿಕೆದಾರನ್ನು ಹುಡುಕುವುದೇ ಏಜೆಂಟರ ಕಲಸ ಎಂದರೆ ನನಗೆ ಮಾಹಿತಿ ಇಲ್ಲ.

ಹೂಡಿಕೆದಾರರಿಗೆ ಸಂಸ್ಥೆಯಿಂದ ಐಡಿ ಕೊಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಪರಿಚಯಿಸಿರುವ ಹೂಡಿಕೆದಾರರ ಸಂಬಂಧ 5 ಐಡಿ ಕೊಟ್ಟಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಈಗ ನೋಡುತ್ತಿರುವ ದಾಖಲೆಯಲ್ಲಿ ಸದರಿ ಐಡಿ ಗಳ ವಿವರ ನಮೂದಾಗಿದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಸ್ಕೀಮ್ ನ ವಿಚಾರವಾಗಿ ಆರೋಪಿ ನನಗೆ ಐದು ಬಾರಿ ಹಣ ಜಮೆ ಮಾಡಿದ್ದಾರೆಯೇ ಎಂದರೆ ಸಾಕ್ಷಿಯು ಆ ಹಣಕ್ಕೂ ನೀವು ಹೇಳಿರುವ ಸ್ಕೀಮ್ ಗೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಗೋಣೇಬೀಡು ಶಾಖೆಯಲ್ಲಿನ ಕರ್ನಾಟಕ ಬ್ಯಾಂಕ್ ನಲ್ಲಿ ಇರುವ ನನ್ನ ಖಾತೆಯ ಕೊನೆಯ ಸಂಖ್ಯೆ'2532500101517101' ಎಂದರೆ ಸಾಕ್ಷಿಯು ಪಾಸ್ ಬುಕ್ ನೋಡಿ ಹೇಳುತ್ತೇನೆ ಎಂದು ನುಡಿಯುತ್ತಾರೆ. ನಿಪಿ-2 ರಲ್ಲಿ ನಮೂದಾಗಿರುವ ಬ್ಯಾಂಕ್ ಖಾತೆ ಸಂಖ್ಯೆ ನನಗೆ ಸೇರಿದ್ದು ಎಂದರೆ ಸರಿ. ಮೇಲೆ ಹೇಳಿದ ಸ್ಕೀಮ್ ನಿಂದ ಬರುವ ಹಣ IDFC ಫಸ್ಟ್ ಬಾಂಕ್ ನಿಂದ ಬರುತ್ತಿತ್ತು ಎಂದರೆ ಸಾಕ್ಷಿಯು ನಾನು ಯಾವುದೇ ಸ್ಕೀಮ್ ನ ಕೆಲಸ ಮಾಡಿಲ್ಲ ಎಂದು ನುಡಿಯುತ್ತಾರೆ.

ಗೋ-20 ಸ್ಕೀಮ್ ನ ರೂ.3,200/- ದಿ.18.04.2023 ರಂದು, ದಿ.05.05.2023 ರಂದು ರೂ.1,425/-, ದಿ.13.05.2023 ರಂದು ರೂ.2,066/- ನನ್ನ ಖಾತೆಗೆ ಜಮೆ ಆಗಿದೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಗೋ-20 ಸ್ಕೀಮ್ ನಡಿ ಆರೋಪಿಯ ಕೆಳಗೆ ಕೆಲಸ ಮಾಡುತ್ತಿದ್ದ ಬಾಬ್ತು ಮೇಲೆ ಹೇಳಿದ ಹಣದ ಬಾಬ್ತು ನ್ನನ ಖಾತೆಗೆ ಜಮೆ ಮಾಡಲಾಗಿದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಆ ದಾಖಲೆಯ ಪ್ರಕಾರ ತಮ್ಮ ಖಾತೆಗೆ ಹಣ ಜಮೆ ಆಗಿರುವುದು ತಿಳಿಯುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ತಮಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಬ್ಯಾಂಕ್ ಖಾತೆಯ ಕೊನೆಯು

ನಾಲ್ಕು ಸಂಖ್ಯೆ'7101' ರ ಸ್ಟೇಟ್ ಮೆಂಟ್ ನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನಾನು ಮೇಲೆ ಹೇಳಿದ ಇ-ಮೇಲ್ ನ ಮೂಲಕ ಆರೋಪಿಗೆ ಮೆಸೇಜ್ ಗಳನ್ನು ಕಳುಹಿಸುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಗೆ ವಾಟ್ಸ್ ಆಪ್ ಚಾಟ್ ನ ಸ್ಕ್ರೀನ್ ಶಾರ್ಟ್ ಗಳನ್ನು ತೋರಿಸಿ ಅದು ನಿಮ್ಮ ಹಾಗೂ ಆರೋಪಿಯ ನಡುವಿನ ಮೆಸೇಜ್ ಗಳು ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ.

ಗೋ-20 ಸ್ಕೀಮ್ ನಡಿ ಕೆಲಸ ಮಾಡಲು ಆರೋಪಿಯಿಂದ ಭದ್ರತೆಗೆಂದು ಖಾಲಿ ಚೆಕ್ ನ್ನು ಕೊಡುವಂತೆ ಕೇಳಿದ್ದೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ಆರೋಪಿಯೊಂದಿಗೆ ವಾಟ್ಸಆಪ್ ಮೂಲಕ ಸಂದೇಶ ಕಳುಹಿಸಿದ್ದೆ ಎಂದರೆ ಸರಿಯಲ್ಲ. ನನ್ನ ವಾಟ್ಸಆಪ್ ಅಕೌಂಟ್ ನ ಪ್ರೊಫೈಲ್ ನೇಮ್ ರತನ್ ಗೋಣೀಬೀಡು ಎಂದಿದೆ ಎಂದರೆ ಸಾಕ್ಷಿಯು ಆ ಬಗ್ಗೆ ನೋಡಿ ಹೇಳುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯೊಂದಿಗಿನ ಚಾಟ್ ಗೆ ಸಂಬಂಧಪಟ್ಟ ನನ್ನ ವಾಟ್ಸಆಪ್ ನ ಚಾಟ್ ಇಸ್ಟರಿಯನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನಾನು ಆರೋಪಿಯೊಂದಿಗೆ ಗೋ-20 ಸ್ಕೀಮ್ ನಡಿ ಕೆಲಸ ಮಾಡುತ್ತಿದ್ದ ವಿಚಾರವನ್ನು ಹಾಗೂ ಈ ಬಗ್ಗೆ ನಾನು ಕಳುಹಿಸಿರುವ ವಾಟ್ಸಆಪ್ ಮೆಸೇಜ್ ಗಳನ್ನು ಒಪ್ಪಿಕೊಂಡರೆ ತೊಂದರೆಯಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಪುನಃ ಕೆಲವು ವಾಟ್ಸ್ ಆಪ್ ಚಾಟ್ ನ ಸ್ಕ್ರೀನ್ ಶಾರ್ಟ್ ಗಳನ್ನು ತೋರಿಸಿ ಅದು ಆರೋಪಿಯು ನಿಮಗೆ ಮಾಡಿರುವ ಮೆಸೇಜ್ ಗಳು ಎಂದರೆ ಸಾಕ್ಷಿಯು ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. ಭದ್ರತೆಗೆಂದು ಆರೋಪಿಯ ಬಳಿ ಖಾಲಿ ಚೆಕ್ ಕೇಳಿರುವ ವಿಚಾರವೂ ಸಹಾ ವಾಟ್ಸಆಪ್ ಚಾಟ್ ಇಸ್ಟರಿಯಲ್ಲಿ ಇದೆ ಎಂದರೆ ಸರಿಯಲ್ಲ.

<u>ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.